**<u>ದಿನಾಂಕಃ 21-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಸಿ ಎನ್ ಎಸ್ ವಕೀಲರಿಂದಃ</u>**

1. ವಾದಿ 1 ರಿಂದ 3 ರವರು ನನ್ನ ತಂದೆಯ ಅಕ್ಕಂದಿರು ಎಂದರೆ ಸರಿ. ನನ್ನ ದೊಡ್ಡಪ್ಪ ಹನುಮಂತಗೌಡ 2003 ಅಥವಾ 2004 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಗುಡ್ಡನಗೌಡ 2016 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ದಾವಾ ಐಟಂ ನಂಃ 5 ನೆ ಆಸ್ತಿ ನನ್ನ ಹೆಸರಿಗೆ ಖರೀದಿ ಆಗಿರುತ್ತದೆ ಎಂದರೆ ಸರಿ. ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಒಕ್ಕಲುತನ ಬಿಟ್ಟು ಬೇರೆ ಯಾವುದೆ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿ ಮೆಡಿಕಲ್ ರೆಪ್ರೆಸೆಂಟೆಟಿವ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಆಸ್ತಿ ಖರೀದಿ ಮಾಡುವ ಸಮಯದಲ್ಲಿ ನನಗೆ ಯಾವುದೆ ವೈಯಕ್ತಿಕ ಆದಾಯ ಇರಲಿಲ್ಲ ಆದ್ದರಿಂದ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

2. ದಾವಾ ಐಟಂ ನಂಃ 3 ನೆ ಆಸ್ತಿ ಮಾರಾಟ ಮಾಡುವ ಕಾಲಕ್ಕೆ ಯಾವುದೆ ಕುಟುಂಬದ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಸಾಲ ಇದ್ದುದ್ದರಿಂದ ಮಾರಾಟ ಮಾಡಿದ್ದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ಯಾವುದೆ ಸಾಲ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಃ 3 ನೆ ಆಸ್ತಿಯನ್ನು ಮಾರಾಟ ಮಾಡುವಾಗ ನಾನು ವಾದಿಯವರನ್ನು ವಿಚಾರಿಸಿರುವುದಿಲ್ಲ. ದಾವಾ ಐಟಂ ನಂಃ 3 ನೆ ಆಸ್ತಿ ಮಾರಾಟ ಮಾಡಿದ್ದರಿಂದ ಬಂದ ಹಣದಲ್ಲಿ ವಾದಿಯವರಿಗೆ ಯಾವುದೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ವಾದಿಯವರಿಗೆ ಸ್ವಲ್ಪ ಹಣ ಕೊಡಲು ಹೋಗಿದ್ದೆ ಆದರೆ ಅವರು ಸ್ವೀಕರಿಸಿಲ್ಲ ಎಂದು ಹೇಳುತ್ತಾರೆ. ವಾದಿಯವರಿಗೂ ಸಹ ದಾವಾ ಐಟಂ ನಂಃ 3 ನೆ ಆಸ್ತಿಯಲ್ಲಿ ಪಾಲು ಇದ್ದುದ್ದರಿಂದ ನಾನು ಅವರಿಗೆ ಹಣ ಕೊಡಲು ಹೋಗಿದ್ದೆ ಎಂದರೆ ಸಾಕ್ಷಿ ವಾದಿಯವರು ನನ್ನ ಅತ್ತೆಯವರಾಗಿದ್ದರಿಂದ ನಾನು ಪ್ರೀತಿಯಿಂದ ಅವರಿಗೆ ಸ್ವಲ್ಪ ಹಣ ಕೊಡಲು ಹೋಗಿದ್ದೆನು.

3. ದಾವಾ 3 ನೆ ಆಸ್ತಿಯ ಮಾರಾಟದ ಕ್ರಯ ಪತ್ರಕ್ಕೆ ವಾದಿಯವರು ಸಹಿ ಹಾಕಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನನ್ನ ಒಬ್ಬನ ಆಸ್ತಿಯಾಗಿದ್ದರಿಂದ ಅದಕ್ಕೆ ನಾನು ಅವರ ಸಹಿ ಹಾಕಿಸಿಲ್ಲ ಎಂದು ಹೇಳುತ್ತಾರೆ. ವಾದಿಯವರಿಗೆ ತಿಳಿಸದೆ ದಾವಾ ಆಸ್ತಿಗಳಿಗೆ ನಮ್ಮ ಮತ್ತು ನಮ್ಮ ದೊಡ್ಡಪ್ಪನ ಮಕ್ಕಳ ಹೆಸರುಗಳನ್ನು ಹಚ್ಚಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿ ವಂಶವೃಕ್ಷದ ಪ್ರಕಾರ ಹೆಸರು ಬಂದಿರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಹೇಗೆ ಹಕ್ಕು ಇದೆಯೋ ಅದೆ ರೀತಿ ವಾದಿಯವರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸಾಕ್ಷಿ 1992 ನೆ

ಇಸ್ವಿಯಲ್ಲಿ ವಾದಿಯವರು ಹಕ್ಕು ಬಿಟ್ಟು ಕೊಟ್ಟು ಹೋಗಿರುತ್ತಾರೆ. ಆ ಬಗ್ಗೆ ಯಾವುದೆ ದಾಖಲೆ ಇರುವುದಿಲ್ಲ. ದಾವಾ ಆಸ್ತಿಗಳ ಬಾಬ್ತು ನಮಗೆ ಯಾವುದೆ ಪಾಲು ಬೇಡ ಎಂದು ವಾದಿಯವರು ಯಾವುದಾದರೂ ನೋಂದಾಯಿತ ಪತ್ರ ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿ ಮನೆ ಮತ್ತು ಕಣಕ್ಕೆ ಬರೆದುಕೊಟ್ಟಿರುತ್ತಾರೆ ಬೇರೆ ಆಸ್ತಿಗಳಿಗೆ ಬರೆದು ಕೊಟ್ಟಿಲ್ಲ ಎಂದು ಹೇಳುತ್ತಾರೆ. 1992 ನೆ ಇಸ್ವಿಯಲ್ಲಿ ವಾದಿಯವರು ದಾವಾ ಆಸ್ತಿಗಳ ಬಗ್ಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಮತ್ತು ನನ್ನ ದೊಡ್ಡಪ್ಪನ ಮಕ್ಕಳು 1992 ನೆ ಇಸ್ವಿಯಲ್ಲಿ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೆ ಪಾಲು ವಿಭಾಗ ಪತ್ರ ಆಗಿಲ್ಲ ಎಂದರೆ ಸಾಕ್ಷಿ ಪಾಲು ವಿಭಾಗ ಆಗಿರುತ್ತದೆ ಆ ಬಗ್ಗೆ ಡ ದಲ್ಲಿ ನಮೂದಾಗಿರುತ್ತದೆ ಪ್ರತ್ಯೇಕ ವಿಭಾಗ ಪತ್ರ ಆಗಿರುವುದಿಲ್ಲ. ನಮಗೂ ಮತ್ತು ನನ್ನ ದೊಡ್ಡಪ್ಪ ಹನುಮಂತಗೌಡ ಪಾಟೀಲ್ ರವರಿಗೂ ಪಾಲು ವಿಭಾಗ ಪತ್ರ ಆಗಿರುತ್ತದೆ. ಆ ಸಮಯದಲ್ಲಿ ವಾದಿಯವರನ್ನು ಪಾಲು ವಿಭಾಗಕ್ಕೆ ಕರಿದಿದ್ದೀರಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ನಾನು ಆಗ ಅಲ್ಪವಹಿ ಆಗಿದ್ದೆ ಎಂದು ಹೇಳುತ್ತಾರೆ. ನಿಡಿ-2 ರಲ್ಲಿ ಕಾನೂನು ಪ್ರಕಾರ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ.

5. ಈ ಕೇಸ್ ದಾಖಲಿಸುವ ಪೂರ್ವದಲ್ಲಿ ವಾದಿಯವರು ದಾವಾ ಆಸ್ತಿಗಳಲ್ಲಿ ನಮಗೂ ಸಹ ಹಕ್ಕು ಇದೆ ಪಾಲು ಕೊಡಿ ಎಂದು ಕೇಳಲು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ಮಕ್ಕಳು ಪಾಲು ಕೊಡಲು ಒಪ್ಪಿದ್ದರು ಆದರೆ ನಾನೆ ಅದಕ್ಕೆ ವಿರೋಧ ಮಾಡಿದ್ದೆ ಎಂದರೆ ಸರಿಯಲ್ಲ. ವಾದಿಯವರು ಹೊಳಿಯಪ್ಪಗೌಡನ ಮಕ್ಕಳು ಎಂದರೆ ಸರಿ. 1992 ರಲ್ಲಿ ಪಾಲು ವಿಭಾಗ ಆಗಿದೆ ಎನ್ನಲಾದಾಗ ಹೊಳಿಯಪ್ಪಗೌಡನಿಗೆ ಯಾವುದೆ ಪಾಲು ಹೋಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಯಾವುದೆ ಪಾಲು ಇಟ್ಟುಕೊಳ್ಳಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ನಮ್ಮ ಮತ್ತು ದೊಡ್ಡಪ್ಪನ ಮಕ್ಕಳ ಹೆಸರಿಗೆ ಮಾಡಿಕೊಂಡಿರುತ್ತೇವೆಯೇ ಹೊರತು ಕಾನೂನಿನ ಪ್ರಕಾರ ಯಾವುದೆ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಈ ಒಳಗಾಗಿ ನಮ್ಮ ನಡುವೆ ಪಾಲು ವಿಭಾಗ ಆಗಿದ್ದು ಆ ಕಾರಣದಿಂದ ವಾದಿಯವರಿಗೆ ಯಾವುದೆ ಪಾಲು ಇಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯವರಿಗೆ 1/6 ಅಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 8 ನೆ ಪ್ರತಿವಾದಿ ಪರ ವಕೀಲರಿಂದಃ** 8 ನೆ ಪ್ರತಿವಾದಿ ಪರ ಕೋರ್ಟ ಗಾರ್ಡಿಯನ್ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ 12 ನೆ ಪ್ರತಿವಾದಿ ಪರ ವಕೀಲರಿಂದಃ</u>** ಪಾಟೀ ಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.